'ಅವ್ವಾ' ಅಂತ ಅರಚಿಕೊಂಡವಳಿಗೆ ಎಚ್ಚರವಾಯಿತು. ಸುತ್ತಲಿದ್ದ ಪ್ರಯಾಣಿಕರು ಇವಳನ್ನೇ ದಿಟ್ಟಿಸಿದರು. ನಿನ್ನೆಯಿಂದ ಊಟ ನಿದ್ದೆಯಿಲ್ಲದೆ ನಿಂತೇ ಪ್ರಯಾಣಿಸಿದ ಆಯಾಸಕ್ಕೆ ಮಂಪರಿಗೆ ಜಾರಿದ್ದಳು. ದುಃಸ್ವಪ್ನಕ್ಕೆ ಮೈಯೆಲ್ಲ ನಡುಗುತ್ತ ಬೆವರುತ್ತಿತ್ತು. ಮರುದಿನ ಅಹಮದಾಬಾದದಲ್ಲಿ ವಲ್ಸಾಡ್ ಗಾಡಿಯಲ್ಲಿ ಮುಂಬಯಿ ತಲುಪಿದಳು. ಅದು ಬೋರಿವಲಿ ಸ್ಟೇಶನ್. ಕರ್ನಾಟಕ ಕಡೆ ಹೋಗೋ ಗಾಡಿ ಬೇಕಿದ್ದರೆ ವಿಟಿ ಸ್ಟೇಶನ್‌ಗೆ ಹೋಗಬೇಕು ಅಂದರು ಅಲ್ಲಿದ್ದವರು. ಲೋಕಲ್‌ನಲ್ಲಿ ನುಗ್ಗಿ ವಿಟಿಯಲ್ಲಿ ಚೆನ್ನೈ ಗಾಡಿ ಹತ್ತಿ ಮರುದಿನ ಶಹಾಬಾದಿನಲ್ಲಿ ಇಳಿದಾಗ ಸಂಜೆಯಾವರಿಸತೊಡಗಿತ್ತು. ಅಲ್ಲಿಂದ ಹಳಿಯ ಮೇಲೆ ನಡೆಯುತ್ತ ಯಾವಾಗಿನ ಸಿಮೆಂಟ್ ಫ್ಯಾಕ್ಟರಿ ಗೇಟೆದುರು ಬಂದವಳಿಗೆ ತಾನು ಹೊರಟು ಎಷ್ಟು ದಿನವಾಯಿತೆಂಬ ಲೆಕ್ಕ ಸಿಗಲಿಲ್ಲ. ಪ್ರತಿ ಕ್ಷಣದ ಆತಂಕದಮೇಲೆ ಹೊತ್ತುಹೊತ್ತಿಗೆ ಊಟ ನಿದ್ದೆಯಿಲ್ಲದೆ ನಿಂತೇ ಮಾಡಿದ ಪ್ರಯಾಣದ ಪರಿಣಾಮಕ್ಕೆ ಅವಳ ಗುರುತು ಅವಳಿಗೇ ಸಿಗುವಂತಿರಲಿಲ್ಲ. ಸಿಮೆಂಟ್ ಫ್ಯಾಕ್ಟರಿ ಗೇಟು ದಾಟಿ ಪರಿಚಿತರು ಸಿಕ್ಕುಬಿಟ್ಟಾರೋ ಎಂಬ ಎದೆಗುದಿ ಹೊತ್ತು ಕಾಲುದಾರಿಯಲ್ಲಿ ನಡೆಯುತ್ತ ಊರು ಮುಟ್ಟಿದಾಗ ಕತ್ತಲು ಹೆಪ್ಪುಗಟ್ಟಿತ್ತು. ಅಷ್ಟು ದೂರದ ತಿರುವಿನಲ್ಲಿ ಮನೆ ಕಾಣುತ್ತಿದ್ದಂತೆ ಅವ್ವನ ತೆಕ್ಕೆಗೆ ಧಾವಿಸುವ ಎದೆಯ ಒತ್ತಡವೇರಿ ಗಂಟಲು ಕಟ್ಟಿ ಕಣ್ಣೀರು ತುಂಬಿ ದಾಪುಗಾಲು ಹಾಕುತ್ತಿದ್ದವಳು ನಾಕು ಮಾರಿದ್ದಾಗ ತಡೆದಳು. ಬೇವಿನಮರಕ್ಕೆ ಹತ್ತಿಕೊಂಡ ಮುಳ್ಳುಜಾಲಿಯ ಮರೆಗೆ ಸರಿದಳು. ಮನೆಯಂಗಳ ಇಲೆಕ್ಟ್ರಿಕ್ ಸರದ ಅಲಂಕಾರದಲ್ಲಿ ಸಡಗರ ಉಕ್ಕಿಸಿಕೊಂಡು ಪುಟಿಯುತ್ತಿತ್ತು. ಶಾಮಿಯಾನಾದ ಕೆಳಗೆ ಶುಭಾ ಮತ್ತು ಮ್ಯಾಗನ ಓಣಿ ಶಾಂತವೀರ ಮದುಮಕ್ಕಳಾಗಿ ಬೀಗುತ್ತ ನಿಂತಿದ್ದರು. ಮದುವೆ ಊಟದ ತರಾವರಿ ಪರಿಮಳ ಘಮ್ಮಂತ ಅವಳಿದ್ದಲ್ಲಿವರೆಗೂ ಬರುತ್ತಿತ್ತು. ಶಾಮಿಯಾನಾದ ಆ ಕಡೆ ಓಣಿ ಅಂಚಿನಲ್ಲಿ ಶರಣಪ್ಪ ಕಾಕಾ ನಿಂತಿದ್ದು ಕಾಣಿಸಿತು. ದುಃಖ ಉಮ್ಮಳಿಸಿ ಬಂತು. ಓಡಿಹೋಗಿ ಅವನೊಡನೆ ಎಲ್ಲಾ ಹೇಳಿಕೊಳ್ಳಬೇಕು ಅಂತ ಹೆಜ್ಜೆಯೆತ್ತಿದವಳಿಗೆ ಮರುಕ್ಷಣ ಕಣ್ಣೀರು ಬತ್ತಿಹೋಯಿತು. ಭಯ ಮುತ್ತಿತು. ಮಿಂಚಿನಂತೆ ಮತ್ತೆ ಮರೆಗೆ ಸರಿದಳು. ಕಾಕಾನ ಪಕ್ಕ ನೆರಳಲ್ಲಿ ಆತ ಕಾಣಿಸಿದ. ಸಿಟ್ಟಿನಲ್ಲಿ ಏನೋ ವಾದ ಮಾಡುತ್ತ ಹಟ ಹಿಡಿಯುತ್ತಿರುವುದೂ ಶರಣಪ್ಪ ಕಾಕಾ ಅವನನ್ನು ಪದೇಪದೇ ಸಮಾಧಾನ ಮಾಡುತ್ತ ಆಶ್ವಾಸನೆ ಕೊಡುವುದೂ ಹಾವಭಾವಗಳಿಂದ ಭಾಸವಾಗುತ್ತಿತ್ತು. ಉಲ್ಲಾಸದಲ್ಲಿ ಅವರದೆ ಲೋಕದಲ್ಲಿರುವ ಹೊಸ ಮದುಮಕ್ಕಳು, ಗೆದ್ದ ಸಡಗರದಲ್ಲಿ ಅತಿಥಿಗಳ ನಡುವೆ ಓಡಾಡುತ್ತಿರುವ ಕಾಶವ್ವ. ಯಾವ ಕ್ಷಣದಲ್ಲಾದರೂ ತಾನು ಇವರಲ್ಲಿ ಯಾರಾದರೊಬ್ಬರ ಕಣ್ಣಿಗೆ ಬಿದ್ದುಬಿಡಬಹುದಾದ ಸಾಧ್ಯತೆ ಹೊಳೆಯುತ್ತಿದ್ದಂತೆ ತಾನೇನೂ ಸೂಚಿಸಲಾರೆ ಅನ್ನುವಂತೆ ನಿಷ್ಕ್ರಿಯವಾದ ಮಿದುಳು, ಸಹಕರಿಸಲಾರೆ ಅನ್ನುವಂತೆ ಜಡಗೊಂಡ ಕಾಲು. ವಿಹ್ವಲತೆ ಮಾತ್ರ ತೀವ್ರವಾಗುತ್ತ ಹೋಗುತ್ತಿತ್ತು.


**ಬನವಾಸಿ ವೆಂಕಟೇಶ ದೀಕ್ಷಿತ್**

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್ ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬಳಿಕ, ದೂರಸಂಪರ್ಕ ಇಲಾಖೆಯಲ್ಲಿ ಉಪ ಮಹಾಪ್ರಬಂಧಕರಾಗಿ ನಿವೃತ್ತರು. ಪ್ರಕಟಿತ ಕಥಾಸಂಕಲನಗಳು: 'ಕಾವಡಿ', ಬೇರಿಗಂಟಿದ ಮಣ್ಣು', 'ಗಡಿಯೀಚೆಯ ಸದ್ದುಗಳು'. ಕಾದಂಬರಿ: 'ನಕ್ಷತ್ರ ನುಂಗುವ ಸದ್ದು'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.